ದೇವರ ರಾಜ್ಯದ

# ಶುಭವಾರ್ತೆ

ಕ್ರಿಸ್ಟಡೆಲ್ಫಿಯನ್ನರ ಸತ್ಯವೇದದ ಸತ್ಯಪ್ರಚಾರ ಪತ್ರಿಕೆ

48

# ಯೇಸುಕ್ರಿಸ್ತನು ಯಾರು ?-2

ಸತ್ಯವೇದದ ಅನೇಕ ವಚನಗಳು ಯೇಸುಕ್ರಿಸ್ತನ ಬಗ್ಗೆ ಸಾಂಕೇತಿಕ ನಿರೂಪಣೆ ಮಾಡುವಂತವುಗಳಾಗಿವೆ. ಈ ಕೆಳಗಿನ ವಚನಗಳನ್ನು ಗಮನಿಸಿ :

> "ನನ್ನ ಚಿತ್ತದಂತೆ ನಡೆಯುವುದಕ್ಕಾಗಿ ನಾನು ಬಂದಿಲ್ಲ
> ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವುದಕ್ಕೆ
> ಪರಲೋಕದಿಂದ ಬಂದೆನು," (ಯೋಹಾನ 6:38)

ಆದರೆ ನಾವು ಕೂಡಲೇ ನಿರ್ಣಯಕ್ಕೆ ಬರಬಾರದು. ಈ ವಿಷಯವು ತೋರುವಷ್ಟು ಸರಳವಾಗಿಲ್ಲ. ಎರಡು ಭಿನ್ನ ರೀತಿಯ ಭಾಷಾ ಶೈಲಿಯನ್ನು ಉಪಯೋಗಿಸಿರುವುದರಿಂದ, ಒಂದು ತೊಂದರೆ ಉದ್ಭವಿಸುತ್ತದೆ. ಅಂದರೆ ವಾಚ್ಯಾರ್ಥ (ಶಬ್ದಾರ್ಥ) ಮತ್ತು ಸಾಂಕೇತಿಕ. ಯೇಸುವು ಎರಡು ರೀತಿಯ ನಿರೂಪಣೆಯನ್ನೂ ತನ್ನ ಮಾತುಗಳಲ್ಲಿ ಉಪಯೋಗಿಸಿದ್ದಾನೆ. ಉದಾಹರಣೆಗೆ ವಚನ 64ರಲ್ಲಿ "ಆದರೆ ನಿಮ್ಮಲ್ಲಿ ಕೆಲವರು ನಂಬದವರಾಗಿದ್ದಾರೆ" ಎಂದೂ ಹೇಳಿದನು. ಇದನ್ನು ಶಬ್ದಾರ್ಥವಾಗಿಯೇ ಅರ್ಥ ಮಾಡಿಕೊಳ್ಳಬೇಕೆಂದು ಒಬ್ಬ ಬಾಲಕನೂ ಸಹ ಹೇಳಬಲ್ಲನು. ಆದರೆ ಕೆಲವು ವಚನಗಳು ಆ ರೀತಿಯಿಲ್ಲ, ಉದಾಹರಣೆಗೆ, 53 ಮತ್ತು 54ನೇ ವಚನಗಳನ್ನು ನೋಡಿ.

> "ನಿಮಗೆ ನಿಜವನ್ನು ನಿಜವಾಗಿ ಹೇಳುತ್ತೇನೆ ನೀವು ಮನುಷ್ಯ ಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯ ಜೀವವನ್ನು ಹೊಂದಿದ್ದಾನೆ."

ಇದು ಸಾಂಕೇತಿಕ ನಿರೂಪಣೆಯ ಭಾಷೆಯಾಗಿದೆ. ಈ ವಚನವು ಅದು ಹೇಳುವಂತೆ ಅದರ ಅರ್ಥ ಇರುವುದಿಲ್ಲ. ಅದು ಇನ್ನೂ ಆಳವಾದ ಅರ್ಥವನ್ನು ಹೊಂದಿರುತ್ತದೆ. ಅದರ ನಿಜಾರ್ಥವನ್ನು ಕಂಡುಹಿಡಿಯಬೇಕಿದ್ದಲ್ಲಿ ನೀವು ಜಾಗರೂಕತೆಯಿಂದ ಆಲೋಚಿಸಬೇಕು. ನಾವು ಜಾಗರೂಕರಾಗದಿದ್ದಲ್ಲಿ, ಅದನ್ನು ಸುಲಭವಾಗಿ ತಪ್ಪಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ವಾಸ್ತವವಾಗಿ ನಂಬದೇ ಇದ್ದ ಯೆಹೂದ್ಯರು ಇದನ್ನು ಹಾಗೂ ಇದೇ ತರಹದ ಯೇಸುವಿನ ಮಾತುಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು. "ಇವನು ತನ್ನ ಮಾಂಸವನ್ನು ನಮಗೆ ಹೇಗೆ ತಿನ್ನುವುದಕ್ಕೆ ಕೊಟ್ಟಾನು" ಎಂದು ಅವರು ಹೇಳಿದರು. ಬಹುಶಃ ಯೇಸು ನರಭಕ್ಷತೆಯನ್ನು ಬೋಧಿಸುತ್ತಿರುವುದಾಗಿ ಅವರು ಯೋಚಿಸಿರಬಹುದು, ಅವರು ಏನಾದರೂ ಆಲೋಚಿಸಿರಲಿ, ಅವರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು.

ಒಳ್ಳೇದು, ಈ ವಚನದ ಬಗ್ಗೆ ಏನು ಹೇಳುವಿರಿ ?

"ನಾನು ಪರಲೋಕದಿಂದ ಇಳಿದುಬಂದಿದ್ದೇನೆ" ಇದು ಶಬ್ದಾರ್ಥವೋ ಸಾಂಕೇತಿಕವೋ ? ಇದು ಸಾಂಕೇತಿಕವೆಂದು ಪರಿಗಣಿಸಲು ಒಳ್ಳೆಯ ಕಾರಣವಿದೆ. ಅದೇ ಅಧ್ಯಾಯದ (6ನೇ) 31ನೇ ವಚನದಲ್ಲಿ ಹಳೇ ಒಡಂಬಡಿಕೆಯಲ್ಲಿ "ಮನ್ನಾ" ಎಂಬುದರ ಬಗ್ಗೆ ಉಲ್ಲೇಖಿಸಿದೆ. ಈ "ಮನ್ನಾ" ಎಂಬುದು ಅರಣ್ಯದಲ್ಲಿ ದೇವರು ಅದ್ಭುತ ಕಾರ್ಯದಿಂದ ತನ್ನ ಜನರಿಗೆ ತಿನ್ನಲು ಒದಗಿಸಿದ ಒಂದು ತರಹದ ರೊಟ್ಟಿಯಾಗಿತ್ತು. 31ನೇ ವಚನವು ಹೀಗಿದೆ: "ಆತನು (ದೇವರು) ಪರಲೋಕದಿಂದ ರೊಟ್ಟಿಯನ್ನು ಅವರಿಗೆ ತಿನ್ನುವುದಕ್ಕೆ ಕೊಟ್ಟನು."

ಇದು ಸಂಪೂರ್ಣವಾಗಿ ಸಾಂಕೇತಿಕ ಭಾಷೆಯಾಗಿದೆ, ಆ ಅದ್ಭುತವಾದ ರೊಟ್ಟಿಯನ್ನು ಪರಲೋಕದಲ್ಲಿ ಬೇಯಿಸಲಿಲ್ಲ ಹಾಗೂ ನಂತರ ಭೂಲೋಕಕ್ಕೆ ರವಾನಿಸಲಿಲ್ಲ. ಅದು ಪರಲೋಕದಿಂದ ಬಂದಿತು ಎಂಬ ವಾಕ್ಯವು ಪರಲೋಕದ ದೇವರು ಅದನ್ನು ಭೂಮಿಯ ಮೇಲೆ ಸೃಷ್ಟಿಸಿದನು ಎಂಬ ಅರ್ಥವನ್ನು ನಮಗೆ ಕೊಡುತ್ತದೆ.

ಬೆಳೆ ಕೊಯ್ಯುವ (ಕೊಯಿಲು) ಕಾಲದಲ್ಲಿ ಅನೇಕರು ಒಂದು ಸ್ತೋತ್ರ ಗೀತವನ್ನು ಹಾಡುತ್ತಾರೆ. ಅದರಲ್ಲಿ "ಎಲ್ಲಾ ಒಳ್ಳೆ ದಾನಗಳು ಮೇಲಣ ಪರ ಲೋಕದಿಂದ ಕೊಡಲ್ಪಟ್ಟವೆ" ಎಂದು ಹಾಡುತ್ತಾರೆ. ಇದರಲ್ಲಿನ ಪದಗಳನ್ನು ಯಾಕೋಬನ ಪತ್ರಿಕೆ 1:17ರಿಂದ ನೇರವಾಗಿ ತೆಗೆದುಕೊಳ್ಳಲಾಗಿದೆ, "ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲ ವಿಧವಾದ ಬೆಳಕಿಗೂ ಮೂಲ ಕಾರಣನಾದವನಿಂದ (ತಂದೆಯಿಂದ) ಇಳಿದುಬರುತ್ತವೆ." ವ್ಯವಸಾಯದಾರರು ಈ ಹಾಡನ್ನು ಹೇಳುವಾಗ, ಅವರ ಬೆಳೆಗಳು ವಾಸ್ತವಿಕವಾಗಿ ಪರಲೋಕದಿಂದ ಇಳಿದುಬಂದಿತೆಂದು ಭಾವಿಸುವುದಿಲ್ಲ, ತಮ್ಮ ಬೆಳೆಗಳನ್ನು ದೇವರು ಕೊಡುತ್ತಾನೆಂದು ಅವರು ಭಾವಿಸುತ್ತಾರೆ.

## ಹೆಚ್ಚು ಸೂಚ್ಯಾರ್ಥಕ (ಸಾಂಕೇತಿಕ) ಭಾಷೆ

ಸತ್ಯವೇದವು ಇಂತಹ ಸೂಚ್ಯಾರ್ಥಕ ಭಾಷೆಯನ್ನು ಮನುಷ್ಯರ ಬಗ್ಗೆ ಹಾಗೂ ವಸ್ತುಗಳ ಬಗ್ಗೆ ಉಪಯೋಗಿಸುತ್ತದೆ. "ದೇವರು ಕಳುಹಿಸಿದ ಒಬ್ಬ ಮನುಷ್ಯನು ಬಂದನು ; ಅವನ ಹೆಸರು ಯೋಹಾನನು" (ಯೋಹಾನ 1:6), ಆದರೂ ಯೋಹಾನನೂ ಎಂದಿಗೂ ಪರಲೋಕದಲ್ಲಿರಲಿಲ್ಲ, "ದೇವರು ಕಳುಹಿಸಿದನು" ಎಂದರೆ ದೇವರು ಅವನಿಗೆ ಒಂದು ವಿಶೇಷ ಕಾರ್ಯವನ್ನು ಮಾಡಲು ಕೊಟ್ಟನು ಎಂದರ್ಥ.

ಆದರೆ ಈ ವಿವರಣೆಯು ಯೇಸುವು ಪರಲೋಕದಿಂದ "ಇಳಿದುಬಂದನು" ಎಂದು ತಿಳಿಸುವ ವಚನಗಳಿಗೆ ಮಾತ್ರ ಅನ್ವಯಿಸುವಂತದ್ದಾಗಿದೆ. ಆದರೆ ಯೇಸುವು ಭೂಲೋಕದ ಮೇಲೆ ಕಾಣಿಸಿಕೊಳ್ಳುವ ಬಹಳ ಹಿಂದೆಯೇ ಆತನು ಪರಲೋಕದಲ್ಲಿ ಒಮ್ಮೆ ಜೀವಿಸಿದ್ದನು ಎಂಬರ್ಥ ಕೊಡುವ ಅನೇಕ ವಚನಗಳು ಸತ್ಯವೇದದಲ್ಲಿವೆ. ಅವುಗಳಲ್ಲಿ ಇದೊಂದಾಗಿದೆ :-

"ಈಗ ತಂದೆಯೇ (ಯೇಸು ಹೇಳಿದ್ದು), ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆ ಪಡಿಸು ; ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು."

ಇಂತಹ ವಚನಗಳ ಬಗ್ಗೆ ಏನು ಹೇಳೋಣ ? ಇವು ಶಬ್ದಾರ್ಥವಾಗಿ ತೆಗೆದು ಕೊಳ್ಳಬಹುದೇ ಇಲ್ಲವೇ ಸೂಚ್ಯಾರ್ಥವಾಗಿ ತೆಗೆದುಕೊಳ್ಳಬಹುದೇ ? ಇಲ್ಲವೇ ಈ ವಚನವು ಇನ್ನೂ ಆಳವಾದ ಅರ್ಥ ಕೊಡುವಂತದೇ ? ಸತ್ಯವೇದವು ತಾನೇ ಮಾತಾಡಿ ಈ ಪ್ರಶ್ನೆಗಳಿಗೆ ಉತ್ತರ ನೀಡಲಿ ಎಂಬುದೇ ಈ ಲೇಖನದ ಉದ್ದೇಶ ವಾಗಿದೆ.

## ಯೇಸುವಿನ ಬಗ್ಗೆ ಮೂರು ಅಭಿಪ್ರಾಯಗಳು

ಸತ್ಯವೇದವನ್ನು ಯಾರು ನಂಬುವುದಿಲ್ಲವೋ ಅಂತಹ ಜನರು ಯೇಸುವು ಒಬ್ಬ ಸಾಮಾನ್ಯ ಮನುಷ್ಯನಾಗಿದ್ದನು ಎಂದು ಅಭಿಪ್ರಾಯ ಪಡುತ್ತಾರೆ, ಅವರ ಅಭಿಪ್ರಾಯವು ತಪ್ಪಾಗಿರುತ್ತದೆ, ಆತನು ದೇವರ ಮಗನಾಗಿದ್ದನು, ಅವರ ಅಭಿಪ್ರಾಯವನ್ನು ಪರಿಗಣಿಸಲು ನಾವು ಸಮಯವನ್ನು ವ್ಯರ್ಥ ಮಾಡುವ ಅಗತ್ಯವಿಲ್ಲ,

ಆದರೆ ಸತ್ಯವೇದವನ್ನು ನಂಬುವ ಕ್ರೈಸ್ತರ ಮೂರು ಭಿನ್ನ ರೀತಿಯ ಅಭಿಪ್ರಾಯಗಳನ್ನು ಪರಿಗಣಿಸೋಣ,

ಮೊದಲನೆಯದು, ಬಹಳ ಸಾಮಾನ್ಯವಾಗಿ ಹೊಂದಿರುವ ಅಭಿಪ್ರಾಯವಾಗಿದೆ. ಇದು, ಯೇಸುವು ಸರ್ವಶಕ್ತನಾದ ದೇವರ ಮಾನವ ರೂಪಿಯಾಗಿದ್ದಾನೆ ಎಂಬುದಾಗಿದೆ ಇದನ್ನು ನಂಬುವ ಜನರು, ಅನೇಕ ವೇಳೆ ಯೇಸುವನ್ನು ತ್ರಯೈಕತ್ವದಲ್ಲಿನ, "ಎರಡನೇ ವ್ಯಕ್ತಿ"ಯಾಗಿದ್ದಾನೆಂದು ಹೇಳುತ್ತಾರೆ ಆದರೂ ಅವರು ಏನೆಂದು ಅರ್ಥ ಮಾಡಿಕೊಂಡಿದ್ದಾರೆಂದು ಕಂಡುಹಿಡಿಯಲು ಸುಲಭ ಸಾಧ್ಯವಿಲ್ಲ, ಈ ಅಭಿಪ್ರಾಯದ ರೀತ್ಯಾ, ಯೇಸುವು ಭೂಲೋಕದ ಮೇಲೆ ಜೀವಿಸುವ ಮುನ್ನ ಆತನು ಎಂದೆಂದಿಗೂ ಪರಲೋಕದಲ್ಲಿ ಜೀವಿಸಿದ್ದನು ಎಂದಾಗುತ್ತದೆ.

ಎರಡನೇ ಅಭಿಪ್ರಾಯವು "ಯೆಹೋವನ ಸಾಕ್ಷಿಗಳು" ಹಾಗೂ ಇತರೇ ಕೆಲವು ಚಿಕ್ಕ ಗುಂಪುಗಳು ಬೋಧಿಸುವಂತಾದ್ದಾಗಿದೆ. ಯೇಸುವು ದೇವರಲ್ಲವೆಂದೂ, ಬಹಳ ಕಾಲದ ಹಿಂದೆಯೇ ದೇವರು ಉಂಟುಮಾಡಿದ ಒಬ್ಬ ಪ್ರಧಾನ ದೂತನೆಂದು ಅವರು ಹೇಳುತ್ತಾರೆ. ಅವರೂ ಸಹ ಯೇಸುವು ಈ ಲೋಕದ ಮೇಲೆ ಜೀವಿಸುವ ಮುನ್ನ ಬಹಳ ಹಿಂದೆಯೇ ಪರಲೋಕದಲ್ಲಿ ವಾಸವಾಗಿದ್ದನೆಂದು ನಂಬುತ್ತಾರೆ.

ಮೇಲ್ಕಂಡ ಎರಡು ಅಭಿಪ್ರಾಯಗಳಲ್ಲೊಂದನ್ನು ಹಿಡಿದಿರುವವರು, ಯೇಸುವು ಪರಲೋಕದಿಂದ ಬಂದನು ಎಂದು ಹೇಳುವ ವಚನಗಳನ್ನು ಅಕ್ಷರಶಃ ಅರ್ಥ ಮಾಡಿಕೊಳ್ಳುವವರಾದಿದ್ದಾರೆ.

ಮೂರನೇ ಅಭಿಪ್ರಾಯವನ್ನು ಕ್ರಿಸ್ಟಡೆಲ್ಫಿಯನ್ನರು ಮತ್ತು ಕೆಲವರು ಹೊಂದಿದ್ದಾರೆ. ಯೇಸುವು ಈ ಲೋಕದಲ್ಲಿ ಹುಟ್ಟುವ ಮುನ್ನ ಪರಲೋಕದಲ್ಲಿ ವೈಯಕ್ತಿಕವಾಗಿ ಜೀವಿಸಿರಲಿಲ್ಲವೆಂದೂ. ಆತನ ಪರಲೋಕ ಮೂಲದ ವಚನಗಳನ್ನು ಸೂಚನಾರ್ಥವಾದಿ ಗ್ರಹಿಸಬೇಕೆಂದೂ ಕ್ರಿಸ್ಟಡೆಲ್ಫಿಯನ್ನರ ಅಭಿಪ್ರಾಯವಾದಿದೆ,

ಈ ಅಭಿಪ್ರಾಯವನ್ನೇ ಈ ಲೇಖನದಲ್ಲಿ ವಿವರಿಸುತ್ತೇನೆ. ಇದು ನಿಮಗೆ ಆಶ್ಚರ್ಯವನ್ನುಂಟುಮಾಡುವುದಾದಲ್ಲಿ, ದಯೆಯಿಟ್ಟು ತಾಳ್ಮೆಯಿಂದಿದ್ದು ಮುಂದಕ್ಕೆ ಓದಿ ಈ ಅಭಿಪ್ರಾಯವನ್ನು ಪುಷ್ಟೀಕರಿಸಲು ಸತ್ಯವೇದದಲ್ಲಿ ಒಂದು ಹೊರೆಯಷ್ಟು ಸಾಕ್ಷ್ಯಾಧಾರಗಳಿವೆ.

## ಯೇಸುವು ನಿಜವಾಗಿಯೂ ಒಬ್ಬ ಮಾನವನಾಗಿದ್ದನು

ಯೇಸುವು ಒಬ್ಬ ಸಾಧಾರಣ ಹಾಗೂ ಪಾಪಿಯಾದ ಮಾನವನಾದಿರಲಿಲ್ಲ, ಈ ಬಗ್ಗೆ ನಾವು ಯಾವುದೇ ತಪ್ಪು ಮಾಡದೇ ಇರೋಣ. ಆದರೂ ಸಹ, ನಿಜವಾದ ಅರ್ಥದಲ್ಲಿ ಆತನು ಒಬ್ಬ ಮಾನವನಾಗಿದ್ದನೇ ಹೊರತು ಸರ್ವಶಕ್ತನಾದ ದೇವರಾಗಿರಲಿಲ್ಲ,

ಆತನು ಶಾರೀರಕವಾಗಿ ಪರಲೋಕಕ್ಕೆ ಹೋದ ಕೂಡಲೇ ಆತನು ಮಾನವನಾಗಿರುವುದು ಕೊನೆಯಾಯಿತು ಎಂದರ್ಥವಲ್ಲ. ಈಗಲೂ ಸಹ ಆತನು ಮಾನವನಾಗಿಯೇ ಇದ್ದಾನೆಂದು ತಿಳಿಯಬೇಕೆಂದು ಸತ್ಯವೇದವು ಬೋಧಿಸುತ್ತದೆ.

ಯೇಸುವು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋದ ಬಹಳ ಕಾಲದ ನಂತರವೂ ಹೊಸ ಒಡಂಬಡಿಕೆಯು ಇಂತಹ ಸಾಕ್ಷ್ಯವನ್ನು ಕೊಡುತ್ತದೆ.

"ಆದರೆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚು ಕಡಿಮೆ ಉಂಟು. ಹೇಗೆಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ........ಮತ್ತೂ ನಿಶ್ಚಯವಲ್ಲವೇ ?........ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವ ಭರಿತರಾಗಿ ಆಳುವುದು ಮತ್ತೂ ನಿಶ್ಚಯವಲ್ಲವೇ ?' [ರೋಮಾಪುರ 5:15-19]

"ದೇವರು ಒಬ್ಬನೇ ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ." [1 ತಿಮೋಥೆ 2:5]

ಹಾಗಾದರೆ ಯೇಸುವು ನಿಜವಾಗಿಯೂ ಒಬ್ಬ ಮನುಷ್ಯನಾಗಿದ್ದಾನೆ. ಹೊಸ ಒಡಂಬಡಿಕೆಯ ನಿಸ್ಸಂದೇಹವಾದ ಬೋಧನೆಯು ಇದೇ ಆಗಿದೆ.

ಆದರೆ ಕೆಲವು ವೇದಾಂತಿಗರು ಹಾಗೂ ಕ್ರೈಸ್ತ ಮತಾಧಿಕಾರಿಗಳು ಹೀಗೆ ಅಭಿಪ್ರಾಯಪಡುತ್ತಾರೆ : "ಯೇಸುವು ಹುಟ್ಟಿ, ಬೆಳೆದ ಒಬ್ಬ ಮಾನವನಾಗಿರಲಿಲ್ಲ ; ಒಂದು ಆಟದಲ್ಲಿ ಪಾಲ್ಗೊಂಡವನಾಗಿ, ಅವನು ಒಂದು ಸೀಮಿತ ಅವಧಿಗೆ ಮಾತ್ರ ದೇವರಾಗಿದ್ದನು. ಅವನು ಮಾನವನಂತೆ ಕಾಣುತ್ತಿದ್ದನು, ಆದರೆ ಒಳಗೆ ದೇವರಾಗಿದ್ದು ಕ್ರಿಸ್‌ಮಸ್ ಫಾದರ್‌ನಂತೆ ಮೇಲೆ ಧರಿಸಿದವನಾಗಿದ್ದನು." [ಡಾ|| ರಾಬಿನ್‌ಸನ್, ವೂಲ್ ವಿಚ್‌ನ ಬಿಷಪ್, ತಮ್ಮ "ಹಾನೆಸ್ಟ್ ಟು ಗಾಡ್" ಎಂಬ ಪುಸ್ತಕದಲ್ಲಿ].

ಯೇಸುವನ್ನು ಕ್ರಿಸ್‌ಮಸ್ ಫಾದರ್‌ಗೆ ಹೋಲಿಸಿರುವುದನ್ನು ಅನೇಕ ಕ್ರೈಸ್ತರು ಖಂಡಿಸಿದರೂ, ಈ ಒಂದು ಅಭಿಪ್ರಾಯವನ್ನು ಒಪ್ಪುವವರಾಗಿದ್ದಾರೆ. ಯೇಸುವು ನಿಜವಾಗಿಯೂ ದೇವರಾಗಿದ್ದಿದ್ದಲ್ಲಿ, ಇಲ್ಲವೇ ಪರಲೋಕದಲ್ಲಿ ಒಂದಾನೊಂದು ಕಾಲದಲ್ಲಿ ವಾಸಿಸುತ್ತಿದ್ದ ದೇವದೂತನಾಗಿದ್ದಲ್ಲಿ, ಅವನು ಎಂದಿಗೂ ಒಬ್ಬ ನಿಜವಾದ ಮನುಷ್ಯನಾಗಿರಲಿಲ್ಲ, ಆದರೆ ಮಾನವ ಶರೀರವನ್ನು ಹೊದ್ದುಕೊಂಡ ಒಬ್ಬ ದೈವೀಕ ವ್ಯಕ್ತಿಯಾಗುತ್ತಾನೆ.

ಆದರೆ ಹೊಸ ಒಡಂಬಡಿಕೆಯು ಒಪ್ಪುವುದಿಲ್ಲ. ಯೇಸುವು ಒಬ್ಬ ಮನುಷ್ಯನೆಂದು ಅದು ಬೋಧಿಸುತ್ತದೆ,

ಯೇಸುವಿನ ಬಗ್ಗೆ ಸಾಮಾನ್ಯಾಭಿಪ್ರಾಯವು ತಪ್ಪಾಗಿದೆ ಎಂದು ನಾವು ಭಾವಿಸುವುದಕ್ಕೆ ಇದು ಮೊದಲನೆಯ ಕಾರಣವಾಗಿರುತ್ತದೆ.

(ಮುಂದುವರಿಯುವುದು) ಭಾ. ಚೆಂದುದಾಸ್

# ಪರ್ವತ ಪ್ರಸಂಗ - 2

## ದುಃಖ ಪಡುವವರು ಧನ್ಯರು ಮತ್ತಾಯ 5:3

ನಾವು ಸಮಾಧಾನ ಪಡೆಯಲು ಲೋಕದಲ್ಲಿ ಹಲವಾರು ಕೊರತೆಗಳನ್ನು ನೀಗಿಸಿಕೊಳ್ಳಬೇಕಾಗಿರುತ್ತದೆ. ಆದರೆ ಕ್ರಿಸ್ತನು ಇಲ್ಲಿ ತಿಳಿಸಿರುವ ಸಂಗತಿ. ಪ್ರಥಮದಲ್ಲಿ ಮನಸ್ಸಿಗೆ ವಿಚಿತ್ರವಾಗಿಯೇ ಕಾಣುತ್ತದೆ. ದುಃಖದಿಂದ ಸಮಾಧಾನವು ಬರುವುದು ಹೇಗೆ ಸಾಧ್ಯ, ಕ್ರಿಸ್ತನ ಮಾತು ಎಂದಿಗೂ ಸುಳ್ಳಾಗುವುದಿಲ್ಲ. ಈ ವಿಷಯದಲ್ಲಿ ಸಮುವೇಲನನ್ನು ಪಡೆದ ಹನ್ನಳು ದೇವರ ಬಳಿಗೆ ಬಂದಾಗ ಯಾವ ಸ್ಥಿತಿಯಲ್ಲಿದ್ದಳು ಎಂಬುದನ್ನು ಕಾಣುತ್ತೇವೆ. ಆಕೆಯು ಈ ಸ್ಥಿತಿಯು ಸಮಾಧಾನವನ್ನು ಹೊಂದಲಿಲ್ಲವೇ ?(1 ಸಮು 1:10,15) : "ಬಹುದುಃಖದಿಂದ ಕಣ್ಣೀರು ಸುರಿಸುತ್ತಾ ಸ್ವಾಮಿ ಹಾಗಲ್ಲ ನಾನು ಬಹು ದುಃಖ ಪೀಡಿತಳು ನಿನ್ನ ದಾಸಿಯಾದ ನನ್ನನ್ನು ಅಯೋಗ್ಯಳೆಂದು ನೆನಸಬೇಡ. ಈವರಗೆ ನನ್ನ ಹೆಚ್ಚಾದ ಚಿಂತೆಯನ್ನು ವ್ಯಥೆಯನ್ನು ಅರಿಕೆಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಿದಳು" (ಸಮು 1:16) ಈಕೆಯು ತನ್ನ ಯಥಾರ್ಥವಾದ ಸ್ಥಿತಿಯನ್ನು ದೇವರ ಮುಂದೆ ನಿಂತು ತಿಳಿಸಿದ ಈ ಪರಿಸ್ಥಿತಿಯನ್ನು ಕಾಣುತ್ತೇವೆ. ನಾವು ದೇವರ ಮುಂದೆ ಹೇಗೆ ನಿಲ್ಲಬೇಕು ಎಂಬುದನ್ನು ಅರಿಯಬೇಕು. ದೇವರ ಕಡೆಗೆ ತಿರುಗುವದರ ಬಗ್ಗೆ ಹಿಂದಿನ ಕಾಲದಲ್ಲಿ ಜನರು ನಡೆದುಕೊಳ್ಳುತ್ತಿದ್ದ ವಿಧಾನವನ್ನು ಗಮನಿಸೋಣ. ಹಿಂದೆ ನಾಶವಾದ ಪಟ್ಟಣಗಳ ವಿಷಯವನ್ನು ತನ್ನ ಕಾಲದಲ್ಲಿನ ಪಟ್ಟಣಗಳಾದ ಖೊರಾಜಿನೇ ಬೆತ್ಸಾಯದವೇ ನೀವು ದೇವರ ಕಡೆಗೆ ತಿರುಗಿದ್ದೇವೆಂಬುದನ್ನು ತೋರಿಸಿರಿ ಎಂದು ಹೇಳಿದನು "ಆಗಲೇ ಗೋಣಿತಟ್ಟು ಹೊದ್ದುಕೊಂಡು ಬೂದಿಯಲ್ಲಿ ಕೂತುಕೊಂಡು ದೇವರ ಕಡೆಗೆ ತಿರುಗಿಕೊಳ್ಳುತ್ತಿದ್ದರು" (ಮತ್ತಾಯ 11:22). ಯೆರೂಸಲೇಮಿನ ವಿಷಯದಲ್ಲಿ ದೇವರು ಯೆಶಾಯನ ಮೂಲಕ ಅದು ಸಂಭ್ರಮದಿಂದ ಕೂಡಿದ್ದರೂ ಅದರ ಸಂಭ್ರಮವು ನಾಶವಾಗುವುದನ್ನು ಕಂಡು ಕಣ್ಣೀರು ಸುರಿಸಿ ಅಂಗಲಾಚಿ ತಲೆ ಬೋಳಿಸಿಕೊಂಡು ಗೋಣಿತಟ್ಟನ್ನು ಸುತ್ತಿಕೊಳ್ಳಿರಿ ಎಂದು ಸೇನಾಧೀಶ್ವರನಾದ ಯೆಹೋವ ದೇವರು ಆ ದಿನದಲ್ಲಿ ನಿಮಗೆ ಆಜ್ಞಾಪಿಸಿದನು" (ಯೆಶಾಯ 22:12). ಪ್ರವಾದಿಯಿಂದ ಬಂದ ಈ ಕಾರ್ಯವು ಆ ಜನರು ತಾವು ಮಾಡಿದ ದೇವರ ಆಜ್ಞೆಗೆ ವಿರುದ್ಧವಾದ ಕಾರ್ಯವನ್ನು ಎಸಗಿರುವದನ್ನು ಒಪ್ಪಿಕೊಂಡು ಅದನ್ನು ಮತ್ತೆ ಮಾಡುವುದಿಲ್ಲವೆಂದು ಸಂಪೂರ್ಣ ಹೃದಯದಿಂದ ದೇವರ ಕಡೆ ತಿರುಗುವುದರಿಂದ ಆ

ಅಪರಾಧಕ್ಕೆ ನೇಮಿತವಾದ ಶಿಕ್ಷೆಯಿಂದ ಪಾರಾಗುತ್ತಿದ್ದರು ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಈಗ ನಾವು ಸಹ ನಮ್ಮ ಪಾಪದ ಅಪರಾಧಗಳಿಗಾಗಿ ಪಶ್ಚಾತ್ತಾಪದ ಹೃದಯದಿಂದ ತಿರುಗುವದಾದರೆ ಕನಿಕರವುಳ್ಳ ನಮ್ಮ ದೇವರು ನಮ್ಮನ್ನು ಸಮಾಧಾನದ ಸ್ಥಿತಿಗೆ ತರುತ್ತಾನೆ.

"ದೇಹದ ಅಭಿಲಾಶೆಗಳಲ್ಲಿ ನಿರತರಾದ ಕ್ರೈಸ್ತ ಜನರಿಗೆ ದುಃಖಿಸಿರಿ, ಗೋಳಾಡಿರಿ, ಕಣ್ಣೀರಿಡಿರಿ, ನಗುವದನ್ನು ಬಿಟ್ಟು ಗೋಳಾಡಿರಿ, ಸಂತೋಷವನ್ನು ಬಿಟ್ಟು ಮನಗುಂದಿದವರಾಗಿರಿ" (ಯಾಕೋಬ 4;8,9). ದೇವರು ಪ್ರವಾದಿಗಳ ಮೂಲಕ ಇಸ್ರಾಯೇಲ್ಯರಿಗೂ ಇದನ್ನೇ ತಿಳಿಸಿದನಲ್ಲವೇ ? ಅವರು ದುಃಖಿತರಾಗಿ ದೇವರ ಮುಂದೆ ಬಂದಾಗ ಶಾಪಕ್ಕೆ ಬದಲಾಗಿ ಆಶೀರ್ವಾದವನ್ನೇ ಹೊಂದಿದರೂ ಅಶ್ಶೂರ್ಯದ ಅರಸನಾದ ಸನ್ಹೇರೀಬನು ಯೆಹೂದ್ಯದ ಮೇಲೆ ದಂಡೆತ್ತಿ ಬಂದಾಗ ಯೆಹೂದ್ಯದ ಅರಸನು ಆತನ ಪರಿವಾರದವರು ಯೆಹೋವನ ಆಲಯಕ್ಕೆ ಹೇಗೆ ಹೋದರು (2 ಅರಸು 19:1,2). "....ಬಟ್ಟೆಗಳನ್ನು ಹರಿದುಕೊಂಡು ಗೋಣಿತಟ್ಟನ್ನು ಕಟ್ಟಿಕೊಂಡು ಯೆಹೋವನ ಆಲಯಕ್ಕೆ ಹೋದನು. ನೀವು ಗೋಣಿತಟ್ಟನ್ನು ಕಟ್ಟಿಕೊಂಡು ಆಮೋಚನ ಮಗನೂ ಪ್ರವಾದಿಯೂ ಆಗಿರುವ ಯೆಶಾಯನ ಬಳಿಗೆ ಹೋಗಿ" ದೇವರು ಅವರ ದುಃಖವನ್ನು ಅರಿತು ಶತ್ರುವಿನಿಂದ ಅವರನ್ನು ಪಾರುಮಾಡಿದನು ನಮ್ಮನ್ನು ದಾಸತ್ವದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುವ ಪಾಪದ ಮೇಲೆ ಹೋರಾಟ ನಡೆಸಲು ಅಶಕ್ತರಾದಾಗ ದೇವರಿಗೆ ಮೊರೆ ಇಟ್ಟರೆ ಹೋರಾಟದಲ್ಲಿ ಜಯಗಳಿಸಲು ಸಹಾಯ ಮಾಡುವನಲ್ಲವೆ ? ಅವರ ದುಃಖವು ಸಂತೋಷಕ್ಕೆ ಬದಲಾಯಿತಲ್ಲವೇ ? ಅದೇ ರೀತಿ ಪಾಪವನ್ನು ಜಯಿಸುವದಾದರೆ ಮರಣದಿಂದ ಪಾರಾಗಿ ಜೀವವನ್ನು ಸೇರುವದರಿಂದ ಅದು ನಮ್ಮನ್ನು ಎಂಥ ಸಂತೋಷಕ್ಕೆ ಕೊಂಡೊಯ್ಯುತ್ತದೆ ಯೋಚಿಸಿ.

ಪೌಲನು ತಿಳಿಸಿರುವಂತೆ ನಮ್ಮ ದುಃಖವು ಲೌಕಿಕ ವಿಚಾರಗಳಿಗಾಗಿ ಇರಬಾರದು ಅದು ತಾತ್ಕಾಲಿಕ ಸಂತೋಷವನ್ನು ಕೊಟ್ಟು ಅಂತ್ಯದಲ್ಲಿ ನಮ್ಮನ್ನು ಸಂಪೂರ್ಣ ದುಃಖಕ್ಕೆ ಒಳಪಡಿಸುತ್ತದೆ ಆದುದರಿಂದ ಕ್ರೈಸ್ತರಾದ ನಮ್ಮ ದುಃಖವು ಯಾವುದಕ್ಕಾಗಿ ಇದೆ ಎಂದು ಅರಿಯಬೇಕು, ಅಂಥ ದುಃಖದಿಂದ ಒದಗುವ ಸಮಾಧಾನ ಎಂಥದ್ದು ? "ನಿಮಗೆ ದುಃಖವಾಯಿತೆಂದು ನಾನು ಸಂತೋಷ ಪಡದೆ ನೀವು ದುಃಖಪಟ್ಟು ಬೇರೆ ಮನಸ್ಸನ್ನು ಹೊಂದಿದ್ದಕ್ಕಾಗಿ ಸಂತೋಷಪಡುತ್ತೇನೆ" 2 ಕೊರಿಂಥ 7:9. ಕ್ರೈಸ್ತರಾದ ನಮ್ಮ ದುಃಖದಿಂದ ದೇವರಿಗೆ ಸಂತೋಷವು ಹೇಗೆ ಆಗುತ್ತದೆ ಎಂಬುದನ್ನು ಯೋಚಿಸಬೇಕು. ಈ ನಮ್ಮ ದುಃಖವು ನಮ್ಮನ್ನು ಹೊಸಬರನ್ನಾಗಿ ಮಾಡುವುದರಿಂದ, ಅದು ನಮ್ಮನ್ನು ನಿತ್ಯ ಜೀವದ ಕಡೆಗೆ ನಡೆಸುತ್ತದೆ, ಮಾನವನು ಮರಣದಿಂದ ಪಾರಾಗಿ ಜೀವದ ಎಡೆಗೆ ಸೇರುವುದು

ಸಂತಸ ಬೀರುವ ಸಂಗತಿಯಲ್ಲವೇ "ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನು ಉಂಟುಮಾಡಿ ರಕ್ಷಣೆಗೆ ಕಾರಣವಾಗಿದೆ" (2 ಕೊರಿಂಥ 7:10). ಸಹೋದರ ಸಹೋದರಿಯರೇ ನಮ್ಮ ದುಃಖವು ಲೌಕೀಕವಾಗಿರದೆ ಅದು ದೇವರ ಚಿತ್ತಾನುಸಾರವಾಗಿರದಿದ್ದರೆ ಅದು ನಿಷ್ಪ್ರಯೋಜನವೇ ಸರಿ.

ಕ್ರಿಸ್ತನು ತನ್ನ ಶಿಷ್ಯರನ್ನು ಕುರಿತು ಹೇಳಿದ ಕೆಲವು ಮಾತುಗಳನ್ನು ಗಮನಿಸಿದರೆ ತಾನು ತಂದೆಯ ಬಳಿಗೆ ಹೋದ ನಂತರ ಅವರ ಪರಿಸ್ಥಿತಿ ಹೇಗಿರುತ್ತದೆಂದು ತಿಳಿಸಿದನು. ಈ ಪರಿಸ್ಥಿತಿಯು ತನ್ನ ಹಿಂದಿರುಗುವಿಕೆಯ ನಂತರ ಬದಲಾಗುವದನ್ನು ಕುರಿತು ಹೇಳಿರುವನು. ಕತ್ತಲೆಯ ನಂತರ ಬೆಳಕು ನಿಶ್ಚಯ, ದುಃಖದ ನಂತರ ಸಂತೋಷ, ಮರಣದ ನಂತರ ಜೀವ. ಈಗ ಸಂತೋಷಿಸುವವರು ಆಗ ದುಃಖಿಸ ಬೇಕು. ಈಗ ದುಃಖಿಸುವವರು ಆಗ ಸಂತೋಷಿಸುವನು. ಆತನ ವಾಕ್ಯಗಳ ನಿಮಿತ್ತ ವಾಗಿ ಈಗ ವ್ಯಥೆಗೊಳಗಾಗುವವರು ಅನಂತರದಲ್ಲಿ ಸಮಾಧಾನ ಹೊಂದುವರು. "ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನೀವು ಅಳುತ್ತಾ ಗೋಳಾಡುತ್ತಾ ಇರುವಿರಿ, ಆದರೆ ಲೋಕವು ಸಂತೋಷಿಸುವುದು. ನಿಮಗೆ ದುಃಖವಾಗುವದು, ಆದರೆ ನಿಮ್ಮ ದುಃಖವು ಹೋಗಿ ಆನಂದವು ಬರುವುದು"(ಯೋಹಾನ 16:20). ಸುವಾರ್ತಾ ಸೇವೆಯಲ್ಲಿ ಆತನ ಹಿಂಬಾಲಕರಿಗೆ ಒದಗುವುದನ್ನು ಕೀರ್ತನಾಕಾರನು ಹೀಗೆ ವರ್ಣಿಸಿರುವನು, "ಅಳುತ್ತಾ ಬಿತ್ತುವವನು ಹಾಡುತ್ತಾ ಕೊಯ್ಯುವನು. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು" (ಕೀರ್ತನೆ 126:5-6). ಶ್ರಮೆಗೆ ತಕ್ಕಂತೆ ಪ್ರತಿಫಲವನ್ನು ಕೊಡುವನು. ಸರಿಯಾದ ಬೀಜವನ್ನು ಬಿತ್ತುವದರಿಂದ ಉತ್ತಮ ಫಲವನ್ನು ನಿರೀಕ್ಷಿಸಬಹುದು.

ದುಃಖದ ಎರಡು ಸಂದರ್ಭಗಳನ್ನು ನಾವು ಗಮನಿಸುವಾಗ ಅವುಗಳಿಂದ ಮುಂದೆ ಸಮಾಧಾನವು ಒದಗುವುದು ಕಂಡುಬರುತ್ತದೆ. ತಮ್ಮ ಪಾಪಗಳನ್ನು ದೇವರಿಗೆ ನಿವೇದಿಸಿ ಅದರಿಂದ ದೂರವಿರುತ್ತೇವೆಂದು ಅರಿಕೆಮಾಡುವದು ಮೊದಲನೇ ಸಂದರ್ಭ. ಆತನು ತಿಳಿಸಿದ ಕಾರ್ಯಗಳನ್ನು ನಿರ್ವಹಿಸುವಾಗ ಒದಗುವ ದುಃಖವು ಎರಡನೆಯದಾಗಿರುತ್ತದೆ. ಈ ಎರಡು ಸಂದರ್ಭಗಳು ನಮ್ಮ ಜೀವಿತೆಯಲ್ಲಿ ಬಾರದಿದ್ದರೆ ನಮ್ಮ ಕ್ರೈಸ್ತ ಜೀವಿತೆಯು ಯಾವ ರೀತಿಯಲ್ಲಿಯೂ ಸಮಾಧಾನಕ್ಕೆ ಕಾರಣವಾಗುವದಿಲ್ಲ.

## ಶಾಂತರು ಧನ್ಯರು

ಶಾಂತರು ಭೂಮಿಯನ್ನು ಬಾಧ್ಯವಾಗಿ ಹೊಂದುವರೆಂಬ ವಾಗ್ದಾನವು ದೊರೆತಿರುತ್ತದೆ. ಈ ವಾಗ್ದಾನವನ್ನು ಮಾಡಿದವನು ಅದರ ಒಡೆಯನಾದ ದೇವರೇ

ಆಗಿರುವುದರಿಂದ ಅದು ಎಂದಿಗೂ ಬಿದ್ದುಹೋಗದೆ ಶಾಶ್ವತವಾದ ಒಡಂಬಡಿಕೆ ಯಾಗಿರುತ್ತದೆ. ದೇವರು ಈ ಒಡಂಬಡಿಕೆಯ ವಾಗ್ದಾನವನ್ನು ಅಬ್ರಹಾಮನಿಗೂ ಅನಂತರದಲ್ಲಿ ಆತನಿಗೆ ವಾಗ್ದಾನದಿಂದ ಹುಟ್ಟಿದ ಮಗನಾದ ಇಸಾಕನಲ್ಲಿಯೂ ಈ ಒಡಂಬಡಿಕೆಯ ವಾಗ್ದಾನ ನೆರವೇರುವುದೆಂದು ತಿಳಿಸಿದನು. ಈ ಲೋಕದಲ್ಲಿ ಸದ್ಭಕ್ತನಾಗಿ ಜೀವಿಸುವವನು ಅದನ್ನು ಶಾಶ್ವತವಾಗಿ ಹೊಂದುವನು ಎಂಬ ವಾಗ್ದಾನವು ನಂಬಿಕೆಯಿಂದಲೇ ನೀತಿವಂತನೆಂದು ಕರೆಯಲ್ಪಟ್ಟ ಅಬ್ರಹಾಮನ ಆ ವಾಗ್ದಾನದಲ್ಲಿ ಬಾಧ್ಯನಾಗಿರುವನು. "ನೀತಿವಂತರು ದೇಶವನ್ನು ಅನುಭವಿಸುವವರಾಗಿ ಅದರಲ್ಲಿ ಶಾಶ್ವತವಾಗಿ ವಾಸಿಸುವರು" (ಕೀರ್ತನೆ 37;29). ಈ ರೀತಿ ಒಂದು ದೇಶವನ್ನು ಸ್ವಾಸ್ತ್ಯವಾಗಿ ಪಡೆಯಲು ಆತನಲ್ಲಿದ್ದ ನಂಬಿಕೆಯೇ ನೀತಿಗೆ ಕಾರಣವಾಗಿದೆ ಎಂಬುದನ್ನು ನಾವು ಅರಿಯಬೇಕು. ಈಗ ದೇವರು ತಿಳಿಸಿರುವ ಸಂಗತಿಗಳಲ್ಲಿ ನಮ್ಮ ನಂಬಿಕೆ ಹೇಗಿದೆ ಎಂದು ಅವಲೋಕಿಸಿಕೊಳ್ಳಲೇ ಬೇಕಲ್ಲವೆ? ನಂಬಿಕೆಯು ನೀತಿ ಎಂಬುದಾಗಿ ದೇವರಿಂದ ಪರಿಗಣಿಸಲ್ಪಡದಿದ್ದರೆ ಸ್ವಾಸ್ಥ್ಯವನ್ನು ಹೊಂದಲು ಅನರ್ಹರಾಗುತ್ತೇವಲ್ಲವೆ? ತಂದೆ, ಮಗ, ಆತ್ಮ, ದೇವರರಾಜ್ಯ, ಪಾಪವಿಮೋಚನೆ, ನಿತ್ಯಜೀವ, ಪುರಣ ಮೊದಲಾದ ವಿಷಯಗಳಲ್ಲಿ ನಮ್ಮ ನಂಬಿಕೆಯು ಸತ್ಯವೇದಕ್ಕೆ ಸರಿಯಾದಿರುತ್ತದೋ? ಹಾಗಿಲ್ಲದ ಪಕ್ಷದಲ್ಲಿ ದೇವರ ವಾಗ್ದಾನದ ದೇಶವನ್ನು ಸ್ವಾಸ್ಥ್ಯವಾಗಿ ಹೊಂದುವೆವೆಂಬ ನಿರೀಕ್ಷೆಯು ಸುಳ್ಳಾಗುತ್ತದಲ್ಲವೆ? ಅಬ್ರಹಾಮನಿಗೂ ಮತ್ತು ಆತನ ಸಂತತಿಗೂ ಇದೇ ವಾಗ್ದಾನವಿರುತ್ತದೆ. "ನಿನ್ನ ಜನರೆಲ್ಲಾ ಸಧರ್ಮಿಗಳಾಗಿರುವರು; ನನ್ನ ಪ್ರಭಾವಕ್ಕೋಸ್ಕರ ನಾನು ನೆಟ್ಟ ಸಸಿಯಾಗಿಯೂ ನನ್ನ ಕೈ ಸೃಷ್ಟಿಸಿದ ಪ್ರಜೆಯಾಗಿಯೂ ದೇಶವನ್ನು ಸದಾ ಅನುಭವಿಸುವರು" (ಯೆಶಾಯ 60:21). ಆತನ ಸೃಷ್ಟಿಗಳಾಗದೆ ಪಾಪದ ದಾಸತ್ವದ ಆದಾಮನ ಮಕ್ಕಳಾಗಿದ್ದರೆ ದೇವರು ಅನುಗ್ರಹಿಸಲಿರುವ ಸ್ವಾಸ್ಥ್ಯತೆಯನ್ನು ಹೊಂದಲಾರವು.

ದೇವರು ಕೊಡುವ ಸ್ವಾಸ್ಥ್ಯವನ್ನು ಪಡೆಯಲು ಇಸ್ರಾಯೇಲ್ಯರಂತೆ ನಾಯಕನ ಶಬ್ದಕ್ಕೆ ಕಿವಿಗೊಟ್ಟು ಆತನನ್ನು ಹಿಂಬಾಲಿಸಿ ನಡೆದರೆ ಮಾತ್ರ ಅದರ ಹಕ್ಕುದಾರರಾಗುತ್ತೇವೆ. ಪಾಪಮಯ ಲೋಕದಲ್ಲಿ ಜೀವಿಸುತ್ತಿರುವ ನಾವು ದೇವರ ಮಗನಾದ ಯೇಸುವಿನ ಮೂಲಕ ಪಾಪ ಪರಿಹಾರ ಹೊಂದಿ ನೂತನ ಸೃಷ್ಟಿಗಳಾಗಿ ಆತನ ಹಿಂಬಾಲಕರಾಗಿ ಜೀವಿಸಿ ನಡೆದು ಆ ಬಾಧ್ಯತೆಯನ್ನು ಪಡೆಯಬೇಕಾಗಿರುತ್ತದೆ. ಬಾಧ್ಯತೆಯನ್ನು ಹೊಂದುವದೇನೋ ನಿಶ್ಚಿತ ಸಂಗತಿ. ಶರೀರಭಾವದ ಕರ್ಮಗಳಿಂದ ದೂರವಾದವರು ಆ ಬಾಧ್ಯತೆ ಹೊಂದುವರೆಂದು ಯಾಕೋಬನು ತಿಳಿಸುತ್ತಾನೆ. ಹದಿನಾಲ್ಕು ವಿಷಯಗಳಿಂದ ದೂರವಿರಬೇಕೆಂದು ಸಹೋದರರಿಗೆ ಎಚ್ಚರಿಕೆ ನೀಡಿರುವನು. ಯಾಕೋಬ 19:20. "ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಇವೆ; ಯಾವುವೆಂದರೆ-ಜಾರತ್ವ, ಬಂಡುತನ ನಾಚಿಕೆಗೇಡಿತನ, ವಿಗ್ರಹಾ

ರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಪಕ್ಷಭೇಧ, ಭಿನ್ನಮತ, ಮತ್ಸರ ಕುಡಿಕತನ ದುಂದೌತಣ ಇಂಥವುಗಳೆ."

## ನಮ್ರತೆ

ದೀನರು, ಶಾಂತರು, ಸಾತ್ವಿಕರು ಎಂಬುದಾಗಿ ಭಾಷಾಂತರಗೊಂಡಿರುವ ಆಂಗ್ಲಪದವು MEEK ಎಂಬುದಾಗಿದೆ, ಮಾನವನು ದೀನತ್ವವನ್ನು ಹೊಂದಿದವನಾಗಿದ್ದರೆ ವಾಗ್ದಾನದಂತೆ ದೇವರು ಸ್ವಾಸ್ಥ್ಯವನ್ನು ಅನುಗ್ರಹಿಸಲಿರುವಾಗ ನಾವು ದೀನರಾಗಿ ಬಾಳುವದನ್ನು ಅಭ್ಯಾಸಿಸಬೇಕಲ್ಲವೆ ? ದೇವರ ಮನೆಯ ಮೇಲೆ ಸೇವಕನಾಗಿ ನೇಮಿಸಲ್ಪಟ್ಟ ಮೋಶೆಯು ದೀನಭಾವದಿಂದ ಕೂಡಿದವನಾದುದರಿಂದ ಈ ಉನ್ನತ ಸ್ಥಾನವನು ಪಡೆದನು. ಆತನಲ್ಲಿ ದೀನಭಾವವು ಇದ್ದುದರಿಂದ ದೇವರ ವಾಕ್ಯಕ್ಕೆ ವಿಧೇಯನಾಗಿ ಇಸ್ರಾಯೇಲ್ಯರ ನಾಯಕನಾಗಿ ಅವರ ಬಿಡುಗಡೆಗೆ ಕಾರಣನಾದನು. ದೇವರು ಶಕ್ತಿವಂತನೆಂಬುದನ್ನು ತಾನು ನಡೆಸಿದ ಕಾರ್ಯಗಳಲ್ಲಿ ತೋರ್ಪಡಿಸಿದನು. ಆ ಮೋಶೆ ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹು ಸಾತ್ವಿಕನು" (ಅರಣ್ಯ 12:3). ದೇವರ ಮುಂದೆ ದೀನತೆಯಿಂದ ವರ್ತಿಸಿದ ಮೋಶೆಯ ಜೀವಿತೆಯ ಮಹತ್ವವನ್ನು ಅರಿತು ಆ ದೀನತೆಯಲ್ಲಿ ನಾವು ನಡೆಯಲು ಪ್ರಯತ್ನಿಸೋಣ. ದೇವರು ಆತನ ಮುಂದೆ ತನ್ನ ಮಾರ್ಗವನ್ನು ತೆರೆದು ಅದರಲ್ಲಿ ತನ್ನ ಜನರನ್ನು ಸುರಕ್ಷಿತವಾಗಿ ನಡೆಸುವಂತೆ ಮಾಡಿದನಲ್ಲವೇ ? ನಾವು ದೀನತೆಯಿಂದ ಬಾಳುವದಾದರೆ ನಮ್ಮ ಅಪಾಯದ ಮಾರ್ಗದಿಂದ ತಪ್ಪಿಸಿ ನೀಟಾದ ಮಾರ್ಗದಲ್ಲಿ ನಡೆಸಬಲ್ಲನು. ಕೀರ್ತನಕಾರನು ತನ್ನ ಅನುಭವದ ಮಾತುಗಳನ್ನು ತಿಳಿಸಿರುವದನ್ನು ಇಲ್ಲಿ ಸ್ಮರಿಸೋಣ. "ಆತನು ದೀನರನ್ನು ತನ್ನ ವಿಧಿಗನುಸಾರವಾಗಿ ನಡೆಸುವನು, ಅವರಿಗೆ ತನ್ನ ಮಾರ್ಗವನ್ನು ತೋರಿಸುವನು" (ಕೀರ್ತನೆ 25:9). ದೇವರ ನಿಯಮವನ್ನು ತಿಳಿಯಲು ಮೊದಲು ನಾವು ದೀನತೆಯಿಂದ ಕೂಡಿದವರಾಗಿರಬೇಕು. ಈ ಲೋಕದಲ್ಲಿ ಜೀವಿಸುವಾಗ ನಮಗೆ ದೇವರೇ ಆಧಾರವಾಗಿಳಲು ಈ ಗುಣವೇ ಪ್ರಮುಖ. ಆತನೇ ಆಧಾರವಾದ ಮೇಲೆ ನಮಗೆ ಯಾವ ಭಯವೂ ಇಲ್ಲ, ನಮ್ಮ ಪ್ರಯಾಣವನ್ನು ಸುರಕ್ಷಿತವಾಗಿ ಸಾಗಿಸಬಹುದು. "ಯೆಹೋವನು ದೀನರಿಗೆ ಆಧಾರವಾಗಿದ್ದಾನೆ, ದುಷ್ಟರನ್ನು ನೆಲಕ್ಕೆ ಹತ್ತಿಸಿಬಿಡುತ್ತಾನೆ" (ಕೀರ್ತನೆ 14?:6).

ಪ್ರಥಮವಾಗಿ ನಮ್ಮಲ್ಲಿರುವ ಎಲ್ಲಾ ತರದ ವಿಷಯಗಳನ್ನು ತೊರೆಯುವದರಿಂದ ದೀನತೆ ಎಂಬುದನ್ನು ಹೊಂದಿಕೊಳ್ಳಲು ಸಾಧ್ಯವೆಂಬುದನ್ನು ಮರೆಯಬಾರದು. ವಿದ್ಯೆ, ಸ್ಥಾನ, ಐಶ್ವರ್ಯ, ಬಲ ಇವುಗಳು ನಮ್ಮ ದೀನತೆಯನ್ನು ಕುಗ್ಗಿಸುವ ಸಂಗತಿಗಳಾಗಿವೆ. ಅದೇ ರೀತಿ ಕೆಟ್ಟ ವಿಷಯಗಳು, ಅಬದ್ಧ ಬೋಧನೆಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮನ್ನು ದೀನತೆಯಿಂದ ದೂರವಿಡಲು

ಪ್ರಯತ್ನಿಸುವವನೆಂಬುದನ್ನು ನೆನಪಿನಲ್ಲಿಡಬೇಕು. ಆದ ಕಾರಣ ಎಲ್ಲಾ ನೀಚತನವನ್ನೂ, ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ." ಯಾಕೋಬ 1:21 ಈ ಕೆಲಸವು ನಮ್ಮಲ್ಲಿ ನಡೆಯದೇ ಹೋದರೆ ದೇವರ ವಾಕ್ಯವು ನಮ್ಮಲ್ಲಿ ಬೇರೂರಿ ಬೆಳೆಯಲಾರದು. ತನ್ನನ್ನು ತಗ್ಗಿಸಿಕೊಳ್ಳುವ ಪ್ರತಿಯೊಬ್ಬನು ಉನ್ನತ ಸ್ಥಿತಿಗೆ ಬರುವನು. ದೇವರು ಪಾಪಿಗಳಾದ ನಮ್ಮಿಂದ ಅಪೇಕ್ಷಿಸುವುದಾದರೂ ಏನು ? ನಮ್ಮ ಗರ್ವವನ್ನು ಬಿಟ್ಟು ಆತನ ಮುಂದೆ ನಿಲ್ಲುವದಾದರೆ ಅಂಥ ದೀನನನ್ನು ಉದ್ಧರಿಸಬಲ್ಲನು. "ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವುದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಹದಲ್ಲಿ ಆರೋಗ್ಯವನ್ನು ದಯಪಾಲಿಸುವೆನು." 2 ಪೂ 7:14. ದೀನಗುಣವು ನಮ್ಮನ್ನು ಪಾಪದ ಕಡೆಯಿಂದ ತಿರುಗಿಸುವಂತದ್ದಾಗಿದೆ. ನಮ್ಮಲ್ಲಿ ದೀನಗುಣವಿದೆ ಎಂಬುದನ್ನು ಪ್ರಕಟಿಸಲು ನಾವೆಲ್ಲರೂ ಪಾಪದ ಸ್ವಭಾವದಿಂದ ತಿರುಗಬೇಕಾಗಿದೆ. ದೀನರನ್ನು ಉದ್ಧರಿಸಲು ದೇವರು ಸದಾಕಾಲವೂ ಸಿದ್ಧನಾಗಿರುವನು.

"ಉನ್ನತ ಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ಜಜ್ಜಿಹೋದ ದೀನ ಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನು, ಜಜ್ಜಿಹೋದವನ ಮನಸ್ಸನ್ನು ಉಜ್ಜೀವಿಸುವವನಾಗಿದ್ದೇನೆ" (ಯೆಶಾಯ 57:15).

ದೀನನು ಮರಣವನ್ನು ಹೊಂದಿದ್ದರೂ ಆತನನ್ನು ಮರಣದಿಂದ ಪಾರು ಮಾಡುವವನೆಂಬುದನ್ನು ಭಕ್ತನು ನಿರೀಕ್ಷಿಸಿರುವನು. "ಆತನು ದೀನರನ್ನು ಧೂಳಿಯಿಂದ ಎಬ್ಬಿಸಿ ಬಡವರನ್ನು ತಿಪ್ಪೆಯಿಂದ ಎತ್ತುತ್ತಾನೆ" (ಕೀರ್ತನೆ 113:7) ಮರಣದಿಂದ ವಿಮೋಚಿತರಾಗಿ ಆತನ ಸ್ವಾಸ್ಥ್ಯಕ್ಕೆ ಬಾಧ್ಯರಾಗಲು ಬೇಕಾದ ದೀನತೆಯನ್ನು ಹೊಂದಲು ಒದಗುವ ಶ್ರಮವನ್ನು ತಾಳುವದು ಅತಿಶಯೋಕ್ತಿಯಲ್ಲ. ಕ್ರಿಸ್ತನು ನಮ್ಮನ್ನು ಈ ದೀನ ಸ್ವಭಾವವನ್ನು ಧರಿಸಲು ಆಹ್ವಾನಿಸಿರುತ್ತಾನೆ. ನಾವು ಆತನನ್ನು ಮಾದರಿಯಾಗಿ ಇಟ್ಟುಕೊಳ್ಳಬೇಕಾಗಿದೆ. ಆತನು ಮರಣದಿಂದ ಬಿಡುಗಡೆ ಹೊಂದಿ ದೀನನಾದವರ ಫಲವೇನು ಎಂಬುದನ್ನು ತೋರಿಸಿಕೊಟ್ಟಿದ್ದಾನೆ. "ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ, ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು" (ಮತ್ತಾಯ 11:29). ಇದು ಪ್ರತಿ ಮಾನವನಿಗೆ ಅಲಂಕಾರವಾದ ವಸ್ತುವಾಗಿದೆ. ಇದನ್ನೇ ದೇವರು ಮೆಚ್ಚುವವನಾಗಿರುತ್ತಾನೆ. "ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ ಇದು ಶಾಶ್ವತವಾದದ್ದು. ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ." 1 ಪೇತ್ರ 3:4,

ಧರ್ಮಶಾಸ್ತ್ರದಲ್ಲಿ ಕಾಣುವ ಸಂಗತಿಗಳಿಗೆ ಹೊರಗಣ ಆಚಾರಗಳಿಗೆ ಪ್ರಾಧಾನ್ಯತೆಯನ್ನು ನೀಡಿ ತನ್ನ ಶ್ರೇಷ್ಠತೆಯನ್ನು ಹೊಗಳಿಕೊಳ್ಳುತ್ತಿದ್ದ ಪೌಲನೇ, ಅದು ಸರಿಯಲ್ಲವೆಂದು ತಿಳಿದು ತನ್ನನ್ನು ತಗ್ಗಿಸಿಕೊಂಡವನಾಗಿ ಸುವಾರ್ತೆಯ ಸೇವೆಯನ್ನು ಮಾಡುವದನ್ನು ಕಾಣುತ್ತೇವೆ. "ನಾನಂತೂ ಅಪೊಸ್ತಲರಲ್ಲಿ ಕನಿಷ್ಟನಷ್ಟೆ; ನಾನು ದೇವರ ಸಭೆಯನ್ನು ಹಿಂಸೆಪಡಿಸಿದ್ದರಿಂದ ಅಪೊಸ್ತಲನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ" 1 (ಕೊರಿಂಥ 15:9) ಮತ್ತೊಂದು ಕಡೆ ತಾನು ಅತ್ಯಲ್ಪನು ಎಂಬುದಾಗಿ ತನ್ನನ್ನು ತಗ್ಗಿಸಿಕೊಂಡರುವನು ಮರೆಯಾಗಿದ್ದ ಸಂಗತಿಗಳನ್ನು ಪ್ರಸಿದ್ಧಪಡಿಸುವದರಲ್ಲಿ ಮತ್ತು ಸುವಾರ್ತಾಸೇವೆಯಲ್ಲಿ ಅಗ್ರಗಣ್ಯನಾದನು. "ಪಾಪಿಗಳಲ್ಲಿ ನಾನೇ ಮುಖ್ಯ" 1 (ತಿಮೋತಿ 1:15). ಪೌಲನು ಹೀಗೆ ತನ್ನನ್ನು ತಗ್ಗಿಸಿಕೊಳ್ಳುವವರ ಜೊತೆಗೆ ತನ್ನ ಅಪರಾಧಗಳನ್ನು ಒಪ್ಪಿಕೊಂಡು ಅವುಗಳನ್ನು ಬಿಟ್ಟು ಬಾಳುವವನಾದನು. ದೀನತೆಯ ಮಹತ್ವವನ್ನು ಅರಿತ ನಾವು ನಮ್ಮಹಾಗೆಯೇ ನಡಿಸಿಕೊಳ್ಳಲು ಅನುಕೂಲವಾಗಿರುವಂತೆ ಆತನ ಧರ್ಮಶಾಸ್ತ್ರವನ್ನ ಆಧಾರವಾಡಿಕೊ. ಪೌಲನ ಆದರ್ಶ–"ನಾವು ಕ್ರಿಸ್ತನನ್ನು ಅನುಸರಿಸುವಂತೆ ನೀವೂ ನನ್ನನ್ನು ಅನುಸರಿಸುವವರಾಗಿರಿ" 1 ಕೊರಿಂಥ 11:1.

## ನೀತಿಗೆ ಹಸಿದು ಬಾಯಾರಿದವರು

ಸುವಾರ್ತಾ ಸೇವೆಯಲ್ಲಿ ತನ್ನ ಶ್ರಮವು ಹೇಗಿದ್ದಿತೆಂದು ತಿಳಿಸುತ್ತಾನೆ. ಆತಗೆ ಒದಗಿದ ಸಂಕಷ್ಟಗಳು ಆತನ ಸೇವೆಗೆ ಅಡ್ಡಿಯಾಗಲಿಲ್ಲ. "ಪ್ರಯಾಸ ಪರಿಶ್ರಮಗಳಿಂದ ಕೆಲಸ ನಡಿಸಿ ಅನೇಕ ಸಾರಿ ನಿದ್ದೆಗೆಟ್ಟು ಹಸಿವೆ ಬಾಯಾರಿಕೆಗಳನ್ನು ಅನೇಕ ಸಾರಿ ಉಪವಾಸವಾಗಿಯೂ ಚಳಿಯಲ್ಲಿಯೂ ವಸ್ತ್ರವಿಲ್ಲದೆಯೂ ಇದ್ದು ಆತನನ್ನು ಸೇವಿಸಿದ್ದೇನೆ." (2 ಕೊರಿ 11:27). ನಾವು ಸತ್ಯ ಸಂಗತಿಗಳನ್ನು ತಿಳಿಯುವ ಸಂದರ್ಭದಲ್ಲಾಗಲಿ ಇಲ್ಲವೆ ಅದನ್ನು ತಿಳಿಸುವ ವೇಳೆಯಲ್ಲಾಗಲಿ ಇಂಥಾ ಶ್ರಮಕ್ಕೆ ಒಳಗಾಗಿದ್ದೇವಲ್ಲವೊ: ? ಇಲ್ಲವೆ. ಇಂಥಾ ಶ್ರಮದ ಜೀವಿತಗೆ ನಾಚಿಕೆ ಪಡದೆ ಧೈರ್ಯವಾಗಿ ಹೋರಾಟ ನಡೆಸಲು ಸಿದ್ಧರಿದ್ದೇವೋ ?

ಮರಣವನ್ನು ಅನುಭವಿಸದೆ ಹೊಸ ಲೋಕವನ್ನು ಪ್ರವೇಶಿಸಿದ ನೋಹನ ವಿಷಯದಲ್ಲಿ ದೇವರು ಏನೆಂದು ಹೇಳಿದನು. "ಆಗ ಯೆಹೋವನು ನೋಹನಿಗೆ — ನೀನು ನನ್ನ ಮನೆಯವರೆಲ್ಲರೂ ನಾವೆಯಲ್ಲಿ ಸೇರಿರಿ. ಈಗಿನವರಲ್ಲಿ ನೀನೊಬ್ಬನೇ ನನ್ನ ಮುಂದೆ ನೀತಿವಂತನಾಗಿ ನಡೆಯುವದನ್ನು ನೋಡಿದ್ದೇವೆ" (ಆದಿಕಾಂಡ 7:1) ಅಂದಿನ ಲೋಕವನ್ನು ನೋಡುವಾಗ ಅದು ಹೇಗೆ ಇದ್ದಿತು ಎಂದು ತಿಳಿಸುತ್ತಾನೆ.

(ಮುಂದುವರಿಯುವುದು) ವಿ. ಜಯವಂತ

# ಸತ್ಯವೇದದ ಮೂಲ ತತ್ವಗಳು - II

I ದೇವರು (ಅ)

1. ಯಾರೂ (ಕ್ರಿಸ್ತನನ್ನು ಹೊರತು) ಬಳಿ ಸಾರಲಾಗದ ಅಗಮ್ಯವಾದ ಬೆಳಕಿನಲ್ಲಿ ಪರಲೋಕದಲ್ಲಿ ಸಶರೀರನಾಗಿ ವಾಸಿಸುತ್ತಿರುವವನು.

1 ತಿಮೋಥೆ 6:15,16; ಕೀರ್ತನೆ 123:1; ಮತ್ತಾಯ 6:10; 1 ಅರಸು 8:30,34,39.

2. ದೇವರು ಒಬ್ಬನೇ-ಮೂವರಲ್ಲ; ಎಲ್ಲರಿಗೂ ತಂದೆಯಾಗಿರುವಾತನು. ಎಫೆಸ 4:6; ಮಾರ್ಕ 12:29-32; 1 ತಿಮೋಥ 2:5; 1 ಕೊರಿಂಥ 8:6; ಯೆಶಾಯ 45:5.

3. ದೇವರು ಸರ್ವಾಂತರ್ಯಾಮಿ (ಅಂದರೆ ಎಲ್ಲೆಲ್ಲಿಯೂ ಇರುವಾತನು) ಮತ್ತು ಸರ್ವಜ್ಞ (ಎಲ್ಲವನ್ನೂ ತಿಳಿಯುವವನು). ಸೂರ್ಯನಿಂದ ಹೇಗೆ ಬೆಳಕು ಮತ್ತು ಶಾಖವು ಹೊರಡುತ್ತದೋ ಹಾಗೆಯೇ ಆತನ ಶಕ್ತಿಯು (Spirit) ಆತನಿಂದ ಹೊರಟು, ಪರಲೋಕವನ್ನೂ ಭೂ ಲೋಕವನ್ನೂ ತುಂಬಿಸುತ್ತದೆ. ಕೀರ್ತನೆ 139:2-12; ಯೆರೆಮೀಯ 23:24; 1 ಅರಸು 8:27; ಯೋಬ 34:14,15.

4. ದೇವರು ಸರ್ವಶಕ್ತನಾಗಿದ್ದಾನೆ (ಅಂದರೆ ಎಲ್ಲಾ ಶಕ್ತಿಯನ್ನು ಅಮರತ್ವವನ್ನು ಮತ್ತು ನಿರಂತರನು) ಹಾಗೂ ಎಲ್ಲಾದರ ಸೃಷ್ಟಿಕರ್ತನೂ ಮತ್ತು ಕಾಪಾಡುವವನೂ ಆಗಿದ್ದಾನೆ. 1 ತಿಮೋಥೆ 1:17; ಕೀರ್ತನೆ 104:30; ಯೋಬ 33:4; 1 ತಿಮೋಥೆ 6:15,16,

5. ದೇವರ ಗುಣ ಲಕ್ಷಣಗಳು. ನೀತಿವಂತನು, ಆದ್ದರಿಂದಲೇ ವಿಧೇಯರಿಗೆ ಒಳ್ಳೆಯದನ್ನೂ ಕೃಪೆಯನ್ನೂ; ಅವಿಧೇಯರಿಗೆ ನಿರ್ದಾಕ್ಷಿಣ್ಯವನ್ನೂ ರೌದ್ರವನ್ನೂ ತೋರಿಸುತ್ತಾನೆ. ರೋಮಾಪುರ 11:22; ವಿ.ಕಾ. 34:6: ಕೀರ್ತನೆ 103.

6. ತನ್ನ ಅಸ್ತಿತ್ವದ ಹಾಗೂ ಉದ್ದೇಶದಲ್ಲಿ ತಿಳುವಳಿಕೆ ಮತ್ತು ನಂಬಿಕೆಯನ್ನು ಮಾನವನು ಹೊಂದಿರಬೇಕೆಂದು ದೇವರು ಅಪೇಕ್ಷಿಸುತ್ತಾನೆ, ಇದರಿಂದ

ಮಾನವನು ನಿತ್ಯ ಜೀವವನ್ನು ಪಡೆಯಲು ಸಹಾಯಕವಾಗುತ್ತದೆ. ಯೋಹಾನ 17:3; ಇಬ್ರಿಯ 11:6;

## II ದೇವರು ತನ್ನನ್ನು ಪ್ರಕಟಿಸಿಕೊಳ್ಳುವುದು (ಅ)

ಮರ್ತ್ಯರು (ಮಾನವರು) ದೇವರನ್ನು ಭೌತಿಕವಾಗಿ ಸಮೀಪಿಸಲು ಅಸಾಧ್ಯವಾಗಿರುವುದರಿಂದ, ದೇವರು ತನ್ನ ನಿಯೋಗಿಗಳಾದ–ಮಾನವರು, ದೇವದೂತರು ಎಲ್ಲಕ್ಕೂ ಮಿಗಿಲಾಗಿ ಕರ್ತನಾದ ಯೇಸು ಕ್ರಿಸ್ತನ ಮೂಲಕ ತನ್ನನು ಪ್ರಕಟಿಸಿಗೊಂಡಿದ್ದಾನೆ. ಅವರು ಆತನ(ದೇವರ) ಪ್ರತಿನಿಧಿಗಳು, ದೂತರು ಇಲ್ಲವೇ ರಾಯಭಾರಿಗಳಾಗಿರುತ್ತಾರೆ. ಇದನ್ನು ನಾವು ದೇವರ-ಪ್ರಕಟಣೆ ಎಂದು ಕರೆಯುತ್ತೇವೆ. ಈ ನಿಯೋಗಿಗಳು ದೇವರ ಆಜ್ಞೆಯಾನುಸಾರ ಮಾತನಾಡಿದರಲ್ಲದೆ ಕಾರ್ಯಾಚರಣೆಯನ್ನೂ ಮಾಡಿದ್ದರಿಂದ, ಅವರನ್ನು "ದೇವರು", "ಕರ್ತರು" ಇತ್ಯಾದಿಯಾಗಿ ಕರೆಯಲಾಗಿದೆ. ಇದೇ ರೀತಿಯಾಗಿ, ಒಬ್ಬ ಮಾರಾಟ ಪ್ರತಿನಿಧಿಯು ನಿಮ್ಮ ಬಾಗಿಲ ಬಳಿಗೆ ಬಂದು, "ಮಾಡರನ್ ಇಂಜಿನೀರಿಂಗ್ ಕಂಪನಿ ಕರೆಯುತ್ತಿರುವುದು" ಎಂದು ಹೇಳಿದಾಗ, ನೀವು ಅದನ್ನು ಅಕ್ಷರಶಃ ಅರ್ಥ ಮಾಡಿಕೊಳ್ಳದೆ, ಅವನು ಆ ಕಂಪನಿಯನ್ನು ಪ್ರತಿನಿಧಿಸುತ್ತಿದ್ದಾನೆಂದು ತಿಳಿದುಕೊಳ್ಳುವಿರಿ,

ಈ ನಿಯಮವನ್ನು ಗ್ರಹಿಸಿದಲ್ಲಿ, ಯೇಸುವನ್ನು "ದೇವರು" ಇತ್ಯಾದಿಯಾಗಿ ಕರೆಯಲ್ಪಟ್ಟ ಸಂದರ್ಭಗಳಲ್ಲಿ "ತ್ರಯೈಕತ್ವದ" (ಸತ್ಯವೇದದಲ್ಲಿ ಹೇಳಲಿಲ್ಲ) ನಂಬಿಕೆಗೆ ಬೆಂಬಲವಾಗಿ ತೆಗೆದುಕೊಳ್ಳದೆ, ಸತ್ಯಕ್ಕೆ ಹೊಂದಾಣಿಕೆ ಮಾಡಲು ತೆಗೆದುಕೊಳ್ಳಬಹುದಾಗಿದೆ.

1 ದೇವದೂತರನ್ನು "ದೇವರು" ಎಂದು ಕರೆಯಲಾಗಿದೆ.

ಆದಿಕಾಂಡ 32:24-30; ಹೋಶೇಯ 12:3-4; ಕೀರ್ತನೆ 8:5; ವಿ.ಕಾ. 3:2,4,6; ಅ.ಕೃ. 7:30.

ವಿ.ಕಾ. 23:20-33-ಪಾಪಗಳನ್ನು ಕ್ಷಮಿಸುವ ಅಧಿಕಾರ ದೇವರಿಗೆ ಮಾತ್ರವೇ ಇರುತ್ತದೆ(ಲೂಕ 5:21ನ್ನು ನೋಡಿ).

2 ಮನುಷ್ಯರೂ "ದೇವರೆಂದು" ಕರೆಯಲ್ಪಟ್ಟಿದ್ದಾರೆ.

ಯೋಹಾನ 10:33-35; ಯೇಸುವು ತಾನು ದೇವರೊಂದಿಗೆ ಆತನ ಉದ್ದೇಶದಲ್ಲಿ ಒಂದಾಗಿರುವುದಾಗಿ (ವ.30) ಹೇಳಿದನೇ ಹೊರತು, ಅಧಿಕಾರದಲ್ಲಲ್ಲ (ವ.19), ವಚನ 34ನ್ನು ಕೀರ್ತನೆ 82:6 ರಿಂದ ಉಲ್ಲೇಖಿಸಿದೆ. ಇಲ್ಲಿ ಇಸ್ರಾಯೇಲಿನ ಯಾಜಕರೂ ಪ್ರಭುಗಳೂ "ದೇವರು" (Elohim)ಗಳೆಂದು ಕರೆಯಲ್ಪಟ್ಟಿದ್ದಾರೆ,

ಅವರು ಇಸ್ರಾಯೇಲ್ಯರ ನಿಜವಾದ ರಾಜನಾಗಿದ್ದ ದೇವರ ಪರವಾಗಿ ಪಾಲಿಸುತ್ತಿದ್ದರು ಹಾಗೂ ಕಾರ್ಯಾಚರಣೆ ಮಾಡುತ್ತಿದ್ದರು (ಸಮು 12:12). ವಚನ 35: ಅವರು ದೇವರ ವಾಕ್ಯವನ್ನು ಹೊಂದಿದ್ದರಿಂದ "ದೇವರು"ಗಳೆಂದು ಕರೆಯಲಾಗಿತ್ತು. ವ. 36: ಯೇಸುವನ್ನು ದೇವರು ನಿರ್ದಿಷ್ಟವಾಗಿ ಪ್ರತಿಷ್ಠಿಸಿ ಕಳುಹಿಸಿ ಕೊಟ್ಟದ್ದರಿಂದ (ಲೂಕ 1:35) ತಾನು ದೇವರ ಹೆಸರನ್ನು ಹೊಂದಿರುವುದಾಗಿ ಹೇಳಿದ್ದರಲ್ಲಿ ಯಾವ ದೂಷಣೆಯೂ ಇರಲಿಲ್ಲ. "ನಾನು ದೇವರ ಮಗನು" ಎಂದು ಹೇಳಿದನೇ ಹೊರತು, ತಾನೇ ದೇವರೆಂದು ಹೇಳಿಕೊಳ್ಳಲಿಲ್ಲ.

ವಿ.ಕಾ. 6:29-7:1:- ಮೋಶೆ ಫರೋಹನಿಗೆ ದೇವರು ಅಂದರೆ ದೇವರ ಪ್ರತಿನಿಧಿ. ಆರೋನನು ಪ್ರವಾದಿ-ಅಂದರೆ ಮೋಶೆಯು ದೇವರು ಹೇಳುವ ಹಾಗೆ ಹೇಳುವನು. ಆರೋನನು ಪ್ರವಾದಿಯ ಹಾಗೆ ದೇವರ ಮಾತನ್ನು ಫರೋಹನಿಗೆ ಹೇಳುವನು.

ವಿ.ಕಾ. 22:28:- "ದೇವರು" (Elohim) –ಇಸ್ರಾಯೇಲ್ ಪ್ರಭುಗಳು "ದೇವರು"ಗಳಾಗಿರಲಿಲ್ಲ. ಅವರು ದೇವರ ಪರವಾಗಿ ಕಾರ್ಯ ನಡೆಸುತ್ತಿದ್ದರಿಂದ, ಅವರನ್ನು ಹಾಗೆ ಕರೆಯಲಾಗಿದೆ (ಅ. ಕೃ. 23:4ನ್ನು ನೋಡಿ).

3. ಯೇಸುವನ್ನು "ದೇವರೆಂದು" ಕರೆಯಲ್ಪಟ್ಟಿದೆ- ಯಾಕೆಂದರೆ,

(i) ಆತನು ದೇವರನ್ನು ಪ್ರಕಟಗೊಳಿಸಿದನು – ಇಬ್ರಿಯ 1:8 – ಇಲ್ಲಿ ಯೇಸು ಕ್ರಿಸ್ತನನ್ನು ದೇವರೆಂದು ಕರೆಯಲಾಗಿದೆ, ಯಾಕೆಂದರೆ, ಆತನ ಸಿಂಹಾಸನವನ್ನು ಈ ಲೋಕದಲ್ಲಿ ಸ್ಥಾಪಿಸುವಾಗ, ಆತನು ದೇವರ ಪರವಾಗಿ ಆಳ್ವಿಕೆ ನಡೆಸುತ್ತಾನೆ. ದೇವರ ಪ್ರತಿನಿಧಿಯಾಗಿ ಆತನು ದೇವರ ರಾಜ್ಯವನ್ನು ಆಳುತ್ತಾನೆ. (ಜೆಕರ್ಯ 14:9).

ಯೋಹಾನ 28:29:- ತೋಮನು ನಂಬಲು ತೊಡಗಿದನು. ದೇವರ ಅದ್ಭುತ ಶಕ್ತಿಯಿಂದ ಸತ್ತವರು ಜೀವಿತರಾಗಿ ಎಬ್ಬಿಸಲ್ಪಟ್ಟರು. ಯೇಸುವು ದೇವರ ಮಗನೆಂಬುದು ಈಗ ದೃಢವಾಯಿತು ! ಯೇಸುವನ್ನು ದೇವರ ಪ್ರತಿನಿಧಿಯೆಂದು ತೋಮನು ಈಗ ಅಂಗೀಕರಿಸಿ, ಯೇಸುವನ್ನು ಹಾಗೆ ಕರೆಯುತ್ತಾನೆ.

(ii) ಯೇಸುವು ದೇವರ ಕಾರ್ಯಗಳನ್ನೇ ಮಾಡಿದನು :

ಯೋಹಾನ 5:36: ಯೇಸುವು ದೇವರ ಕಾರ್ಯಗಳನ್ನೇ ಮಾಡಿದನು. ಹೀಗೆ ಆತನು ದೇವರನ್ನು ಪ್ರತಿನಿಧಿಸಿದನು ಹಾಗೂ ದೇವರನ್ನು ತನ್ನ ತಂದೆಯೆಂದು ಹಕ್ಕು ಸಾಧಿಸಲು ಸಾಧ್ಯವಾಯಿತು, ಒಬ್ಬ ಮಾನವನಾಗಿ ಆತನು ಏನೂ ಮಾಡಲು

ಸಾಧ್ಯವಿರಲಿಲ್ಲ (ವ. 19). ಯೆಹೂದ್ಯರು ಆತನನ್ನು ತಪ್ಪಾಗಿ ಅರ್ಥ ಮಾಡಿಕೊಂಡಂತೆ, ಯೇಸುವು ತನ್ನನ್ನು ಅಧಿಕಾರದಲ್ಲಿ ತನ್ನ ತಂದೆಗೆ ಸಮನೆಂದು ಹೇಳಿಕೊಳ್ಳಲಿಲ್ಲ (ವ. 18). ಆತನು ದೇವರ ಮಗನಾಗಿದ್ದನು. ಮತ್ತು ಇಸ್ರಾಯೇಲ್ಯರಿಗೆ ದೇವರ ಹೆಸರನ್ನು ಧರಿಸಿದವನಾಗಿದ್ದನು. (ಯೋಹಾನ 1:14; ಇಬ್ರಿಯ 1:8-9ನ್ನು ನೋಡಿ.

(iii) ಯೇಸುವು ದೇವರ ಮಾತುಗಳನ್ನೇ ಆಡಿದನು :

ಯೋಹಾನ 12:40-50: ಯೇಸುವು ದೇವರ ಪರವಾಗಿ ಮಾತನಾಡಿದನು. "ತನ್ನದೆ ಆದ" ಮಾತುಗಳನ್ನು ಎಂದಿಗೂ ಆಡಲಿಲ್ಲ. ಹೀಗೆ ಆತನು ದೇವರ ದೂತನಾಗಿ, ತಾನೂ ಸಹ "ದೇವರು" ಎಂದು ಹೇಳಿಕೊಳ್ಳಲು ಸಾಧ್ಯವಿತ್ತು. ಈ ಮಾತುಗಳು ಧ. ಕಾ. 18:18 ರಲ್ಲಿ "ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು" ಎಂದು ಹೇಳಿರುವದಕ್ಕೆ ಪ್ರಸ್ತಾಪನೆಯಾಗಿದೆ. (ಯೋಹಾನ 20:28-29ನ್ನು ನೋಡಿ).

iv ಯೇಸುವು ದೇವರ ಚಿತ್ತವನ್ನೇ ಮಾಡಿದನು :

ಯೋಹಾನ 14:7-11 ತಂದೆಯ ನೈತಿಕ ಹಾಗೂ ಬೌದ್ಧಿಕ ಮಹಿಮೆಯ ಪೂರ್ಣ ಪ್ರತಿನಿಧಿಯಾಗಿದ್ದನು. "ಆತನನ್ನು (ಯೇಸುವನ್ನು) ತಿಳಿಯುವುದೇ "ದೇವರನ್ನು" ತಿಳಿಯುವುದಾಗಿತ್ತು. (ಕೊಲೊಸ್ಸೆ 1:15; 2:9). ಇಬ್ರಿಯ 1:3; ಯೋಹಾನ 17:3ನ್ನು ನೋಡಿ). ಕ್ರಿಸ್ತನ ಮಹತ್ವವನ್ನು ಗ್ರಹಿಸುವುದೇ ದೇವರ ಮಾರ್ಗವನ್ನು ತಿಳಿಯುವುದಾಗಿದೆ. "ನೋಡುವುದು" ಅಂದರೆ, (1) ಬೌದ್ಧಿಕವಾಗಿ ಗುಣಗ್ರಹಣ ಮಾಡುವುದು, ನಂತರ(2) ಆತನ ಗುಣವನ್ನು ನಮ್ಮ ವೈಯಕ್ತಿಕ ಜೀವಿತದಲ್ಲಿ ನೈತಿಕವಾಗಿ ಪ್ರಕಟಗೊಳಿಸುವುದು ಎಂದರ್ಥ. ಕ್ರಿಸ್ತನ ಮಾತುಗಳು ಮತ್ತು ಕಾರ್ಯಗಳು ಆತನ ಸ್ವಂತ ಬುದ್ಧಿಯಿಂದ ಬಂದದ್ದಾಗಿರಲಿಲ್ಲ. ಆದರೆ ದೇವರು ತನ್ನ ಶಕ್ತಿಯ ಮೂಲಕ ಯೇಸುವಿನಲ್ಲಿ ವಾಸಿಸಿದ್ದು, ಅದರಿಂದ ಬಂದದ್ದಾಗಿತ್ತು(ಯೋಹಾನ 1:33ನ್ನು ನೋಡಿ).

(ಮುಂದುವರೆಯುವುದು)

—ಭಾ. ಚಂದುದಾಸ್